ಫಕೀರನಿಗೆ ಮಾತನಾಡಲೂ ಅವಕಾಶ ಕೊಡದೆ, ಒಳಗೆ ದಬ್ಬಿದರು. ಅವನು ತನ್ನ ಕಿಸೆಯಲ್ಲಿಟ್ಟಿದ್ದ ಕಾರ್ಡುಗಳನ್ನು ಪದೆ ಪದೆ ಮುಟ್ಟಿಕೊಳ್ಳುತ್ತ, ವಿಚಿತ್ರವಾಗಿ ನಡೆಯುತ್ತ ಆ ದೊಡ್ಡ ಗಾಜಿನ ಬಾಗಿಲ ಕಡೆ ನಡೆದ. ಗಾಜಿನ ಬಾಗಿಲ ಬಳಿ ಕೆಂಪಂಗಿಯವ ನಿಂತಿದ್ದ. ಅವನು ವಿಚಿತ್ರ ರೀತಿಯ ಮುಂಡಾಸು ಧರಿಸಿದ್ದ. "ಕಾರ್ಡುಕೊಡು" ಎಂದ.

"ವಾಕೆ" ಎಂದ ಫಕೀರ.

"ಕಾರ್ಡು."

"ಹೌದಲ್ರಿ" ಎಂದು ಕಿಸೆಯಲ್ಲಿ ಕೈಹಾಕಿ ಎರಡು ಕಾರ್ಡುಗಳನ್ನು ತೆಗೆದುಕೊಟ್ಟ. ಕೆಂಪಂಗಿಯವ ಅವನನ್ನು ಕರೆದುಕೊಂಡು ರಿಸೆಪ್ಷನ್‌ಗೆ ಹೋಗಿ ಕಾರ್ಡು ಕೊಟ್ಟ. ಅವರು ಕಾರ್ಡಿನ ಮೇಲಿನ ಹೆಸರನ್ನು ಒಂದು ಕಂಪ್ಯೂಟರ್‌ನಲ್ಲಿ ಟೈಪ್ ಮಾಡಿ ಇನ್ನೊಂದು ದೊಡ್ಡ ಪುಸ್ತಕ ಕೊಟ್ಟು ಸಹಿಮಾಡಲು ಹೇಳಿದರು.

"ಇಲ್ಲಿ ಸಹಿ ಮಾಡು" ಎಂದ ಕೆಂಪಂಗಿಯವ.

"ನನಗ ಬರ್‍ಯಾಕ ಬರೂದಿಲ್ಲರಿ."

ಅವ ಹಣೆಹಣೆ ಚಚ್ಚಿಕೊಂಡು, ರಿಸೆಪ್ಷನಿಸ್ಟಿನ ಗಮನ ಬೇರೆ ಕಡೆ ಹೋದಾಗ ತಾನೆ ಸಹಿ ಮಾಡಿಬಿಟ್ಟ! ದೊಡ್ಡ ಕೀಲಿ ಕೈ ಕೊಟ್ಟರು. ಕೆಂಪಂಗಿಯವನೊಡನೆ ಫಕೀರ ಹೊರಟ. ಲಿಫ್ಟಿನಲ್ಲಿ ಫಕೀರ ಭಯಭೀತನಾದ. ಅದರ ಸುತ್ತಲೂ ಗಾಜಿದ್ದುದರಿಂದ ಅವರು ಮೇಲೆ ಹೋದಂತೆ ಕೆಳಗಿನದು ಚಿಕ್ಕದಾಗಿ ಕಾಣತೊಡಗಿತು. ಅಷ್ಟು ಎತ್ತರಕ್ಕೆ ಎಂದೂ ಹೋಗಿರದಿದ್ದ ಫಕೀರನಿಗೆ ತಲೆ ಸುತ್ತತೊಡಗಿತು. ಅವನು ಕೆಂಪಂಗಿಯವನನ್ನು ಗಟ್ಟಿಯಾಗಿ ಹಿಡಿದುಕೊಂಡ. ಒಂದು ಎತ್ತರ ತಲುಪಿದೊಡನೆ ಲಿಫ್ಟ್ ಗಕ್ಕನೆ ನಿಂತಿತು, ಬಾಗಿಲು ತಾನೆ ತೆರೆಯಿತು. ಕೆಂಪಂಗಿಯವನು ಇವನನ್ನು ಕೈ ಹಿಡಿದು ಕರೆದುಕೊಂಡು ಹೊರಟ. ಕೊನೆಗೆ ಒಂದು ಬಾಗಿಲು ತೆರೆದು ಒಂದು ದೊಡ್ಡ ಕೋಣೆಯಲ್ಲಿ ಕರೆದುಕೊಂಡು ಹೋದ. ಅದರ ವಿಶಾಲತೆ, ಅಲ್ಲಿರುವ ಸೋಫಾ, ಹಾಸಿಗೆ, ಮಂಚ, ಗೋಡೆಯಲ್ಲಿಯ ಚಿತ್ರಗಳನ್ನು ಕಂಡು ಫಕೀರ ಕೈಯಲ್ಲಿಯ ಪೆಟ್ಟಿಗೆಯನ್ನು ಮಂಚದ ಮೇಲಿಟ್ಟು ಕೆಳಗೆ ಹಾಸಿದ ಕಂಬಳಿಯ ಮೇಲೆ ಕುಳಿತು ತನ್ನ ಪ್ಯಾಂಟಿನ ಕಿಸೆಯಲ್ಲಿದ್ದ ಬೀಡಿ ಕಟ್ಟನ್ನು ಹೊರತೆಗೆದ. ಕೆಂಪಂಗಿಯವ ಅವನನ್ನು ರಟ್ಟೆಗೆ ಕೈಹಾಕಿ ಸೋಫಾದ ಕುರ್ಚಿಯ ಮೇಲೆ ಕೂಡಿಸಿ, ಅವನ ಪಕ್ಕದ ಚಿಕ್ಕ ಟೇಬಲ್ ಮೇಲೆ ಆ್ಯಶ್ ಟ್ರೇ ತಂದಿಟ್ಟು "ಬೂದಿ ಇದರಾಗ ಹಾಕು" ಎಂದ. ಅಷ್ಟೊತ್ತಿಗೆ ಫಕೀರ ಬೀಡಿ ಹೊತ್ತಿಸಿದ್ದ.

"ಎಲ್ಲಾ ಇಲ್ಲೆ ಬರುತ್ತೆ. ನೀವೆಲ್ಲೂ ಹೊರಗೆ ಹೋಗಬೇಡಿ. ನಾನೇ ಬಂದು ನಿಮ್ಮನ್ನು ಕರಕೊಂಡು ಹೋಗ್ತೇನಿ. ನಿಮಗ ಯಾರನ್ನು ಭೇಟಿಯಾಗೋದಿದೆ ಅವರನ್ನ ಭೇಟಿ ಮಾಡಸ್ತೇನಿ" ಎಂದು ಹೇಳಿ ಅವನು ಹೊರಟು ಹೋದ. ಮಧ್ಯಾಹ್ನದ ಊಟವಾದ ಮೇಲೆ ಕೆಂಪಂಗಿಯವ ಬಂದ. ಕುತನಿಗಾದಿಯ ಮೇಲೆ ಮಲಗಿದ್ದ ಫಕೀರನಿಗೆ ಎಲ್ಲಿಯೂ ಹೋಗುವ ಮನಸ್ಸಿರಲಿಲ್ಲ. ಒಲ್ಲದ ಮನಸ್ಸಿನಿಂದ ಎದ್ದು ಅವನನ್ನು ಹಿಂಬಾಲಿಸಿದ. ಅವನು ನಾಲ್ಕೈದು ರೂಮುಗಳನ್ನು ದಾಟಿದ ಮೇಲೆ ಒಂದು ರೂಮಿನ ಎದುರು ನಿಂತು ಬಾಗಿಲು ತಟ್ಟಿದ. ಫಕೀರ ತನ್ನ ಕೈಯಲ್ಲಿ ದೊಡ್ಡ ಸೂಟ್‌ಕೇಸ್ ಹಿಡಿದುಕೊಂಡಿದ್ದ. ಬಾಗಿಲು ತೆರೆದೊಡನೆ ಕೆಂಪಂಗಿಯವ ಫಕೀರನನ್ನು ಒಳಗೆ ನೂಕಿ ಅಲ್ಲಿಂದ ಓಡಿ ಹೋಗಿ ಬಿಟ್ಟ! ಫಕೀರ ಒಳಗೆ ಬಂದು ತನ್ನನ್ನೇ ಸಾವರಿಸಿಕೊಳ್ಳುತ್ತ ಎದ್ದು ನಿಂತ. ಕೈಯಲ್ಲಿಯ ಪೆಟ್ಟಿಗೆಯನ್ನು ಭದ್ರವಾಗಿ ಹಿಡಿದುಕೊಂಡಿದ್ದ. ಅಲ್ಲಿ ನಾಲ್ಕೈದು ಜನರಿದ್ದರು. ಅವರೆಲ್ಲ ಇಸ್ಪೀಟಾಟದಲ್ಲಿ ಮಗ್ನರಾಗಿರುವಂತೆ ಇವನಿಗೆ ತೋರಿತು. ಸುರೇಶಣ್ಣನ ಮುಖ ಕಂಡೊಡನೆ ಫಕೀರನಿಗೆ ಆನಂದವಾಗಿ "ಸುರೇಶಣ್ಣ" ಎಂದು ಕೂಗುತ್ತ ಅವನ ಬಳಿ ಸಾಗಿದ. ಬಾಗಿಲು ತೆಗೆದವನು "ಅಲ್ಲೇ ನಿಲ್ಲು. ಯಾರು ನೀನು?" ಎಂದು ಗದರಿಸಿದ. ಸುರೇಶಣ್ಣ ಎದ್ದು ಬಂದ. ಅವನು ಒಮ್ಮೆ ಕಾಲಿನಿಂದ ತಲೆಯವರೆಗೆ ಫಕೀರನನ್ನು